ಪೋಷಕರಿಗೆ ಏನನ್ನೊ ಹೇಳುವುದು, ಅವರು ಗದರಿ ಸುಮ್ಮನಿರಿಸುವುದು, ಡ್ರೈವರಲ್ಲಿ ಹೋಗಿ ವಿಚಾರಿಸುವುದು ನಡೆದಿತ್ತು. ಸದರಿ ಮೂಕನಾಟಕ ನನ್ನಲ್ಲಿದ್ದ ಕರುಣೆಯನ್ನು ಬಡಿದೆಬ್ಬಿಸಿತು. ಬಿಸ್ಕತ್ತು ಕೊಟ್ಟು ಶಿಶುಪಾಲನಾಗಲು ಹೋದೆ. ಬಿಸ್ಕತ್ತನ್ನು ಕಂಡೊಡನೆ ಮಗು ಬೆಚ್ಚಿಬಿದ್ದು ರೋದಿಸತೊಡಗಿತು. ಆಗ ತಾಯಿ 'ಅಣ್ಣಾರೆ, ಬಿಸ್ಕತ್ತು ಜಾಸ್ತಿಯಾಗೇ ಹಿಂಗಾಗದ. ಎಲ್ಡು ಪ್ಯಾಕೆಟ್ ಒಂದೇ ಸಲಕ್ಕ ಖಾಲಿ ಮಾಡ್ಯಾಳ. ಪೈಖಾನೆ ಹೋಗಬೇಕು ಅಂತ ಅಳಲಿಕ್ಕ ಹತ್ಯಾಳ' ಎನ್ನುತ್ತ, ಡುಬ್ಬದ ಮೇಲೆ ಎರಡು ಕಡುಬನ್ನು ಹೇರಿ 'ನಿನ್ನೊಡ್ಲು ಬಿರಿಯ' ಎಂದು ಹರಸಿದಳು.

ಜಡಗೊಂಡ ಪಯಣಕ್ಕೆ ಕಚಗುಳಿ ಇಡುವುದರಲ್ಲಿ ಕುಡುಕರಿಗೆ ಎರಡನೇ ಸ್ಥಾನ. ಒಮ್ಮೆಯಂತೂ ಒಬ್ಬಾಕೆಗೆ ನಿಲ್ಲಲೂ ತ್ರಾಣವಿರಲಿಲ್ಲ. 'ಹ್ಹುಂ! ನಮ್ಮ ದೇಶದ ಪರಿಸ್ಥಿತಿ ಎಲ್ಲಿಗೆ ಬಂತು ನೋಡ್ರೀ?' ಎಂದು ಒಬ್ಬ ಸಭ್ಯಸ್ಥ ಗೊಣಗಿದ. ಆಕೆ ಸರಕ್ಕನೆ ತಿರುಗಿ 'ಗಣಸಮಕ್ಕಳು ನೀವು ಕುಡಿದರ ನಡೀತತಿ; ನಾವು ಕುಡದರ ತೆಪ್ಪಾ?' ಎಂದು ಪ್ರಶ್ನಿಸಿದಳು. ಇದು ದ್ರೌಪದಿ ದ್ಯೂತಪ್ರಸಂಗದಲ್ಲಿ ಕೌರವಸಭೆಯಲ್ಲಿ ಭೀಷ್ಮಾದಿಗಳ ಬಾಯಿಕಟ್ಟುವಂತೆ ಎತ್ತಿದ ಧರ್ಮಪ್ರಶ್ನೆ. ಸಭ್ಯಸ್ಥನ ದನಿಯುಡುಗಿತು. ಆಕೆಯ ಅದೃಷ್ಟಕ್ಕೆ ಕಂಡಕ್ಟರ್ ಸಹನಾಮೂರ್ತಿ... ಆಕೆ ಊರು ಬಂದಾಗ ಹುಶಾರಾಗಿ ಇಳಿಸಿ, ರಸ್ತೆಬದಿಯಲ್ಲಿದ್ದ ಆಟೊದವನಿಗೆ ಮನೆ ಮುಟ್ಟಿಸುವಂತೆ ವಿನಂತಿಸಿದ. ಆಕೆ ಅವನ ಅಂತಃಕರಣಕ್ಕೆ ಕರಗಿದಳು. ಬಸ್ಸನ್ನು ಅಡ್ಡಗಟ್ಟಿ ನಿಲ್ಲಿಸಿದಳು; 'ತಮ್ಮಾ, ನನ್ನ ತಮ್ಮಾ, ನೀ ಚಾ ಕುಡಿಬೇಕು' ಎಂದು ಅಕ್ಕರೆ ಸುರಿಸುತ್ತ ಹತ್ತು ರೂಪಾಯಿ ಆಹೇರಿ ಮಾಡಿದಳು.

ಕುಡುಕರು ಕಿರಿಕಿರಿ ಹೌದು, ದುಷ್ಟರಲ್ಲ. ಆದರೆ, ಉಗ್ರಾವತಾರದಿಂದ ಶಾಂತಾವತಾರಕ್ಕೆ ಯಾವಾಗ ಇಳಿವರೊ, ಒದ್ದೆಬಟ್ಟೆ ಯಾವಾಗೆದ್ದು ಸರ್ಪವಾಗಿ ಭುಸುಗುಡುವುದೊ ಅವರಿಗೇ ಗೊತ್ತಿಲ್ಲ. ಸಿರುಗುಪ್ಪ ಕಡೆಯ ಮುದುಕನೊಬ್ಬ ಹುಬ್ಬಳ್ಳಿಗೆ ಹೊರಟವನು ನಶೆಯ ಹೊಡೆತಕ್ಕೆ ಸೀಟಿನುದ್ದಕ್ಕೂ ಕುಂಭಕರ್ಣನಾಗಿದ್ದನು. ಸೀಟಿಲ್ಲದವರು ಎಬ್ಬಿಸಲೆತ್ನಿಸಿ ಸೋತರು. ಒಬ್ಬ ಧೀರ ಮಾತ್ರ, ವೈಶಂಪಾಯನದಿಂದ ಸುಯೋಧನನ್ನು ಹೊರಡಿಸುವ ಭೀಮನಂತೆ 'ಏ ಮಾರಿ ಏನ್ ನೋಡ್ತೀರಿ, ಆ ಮುದ್ಯಾತನ್ನ ಎಳದ ಕೆಳಗ ಒಗೀರಿ' ಎಂದನು. ಸಂದೇಶ ಸುಪ್ತಪ್ರಜ್ಞೆಗೆ ಮುಟ್ಟಿತು. ಝುಕ್ಕನೆದ್ದ ಮುದುಕ 'ಯಾರಪಾ ಅದು ನನ್ನೆಳದ ಹಾಕಾ ಬಹದ್ದೂರ? ಏನಂತ ತಿಳದಿ ನನ್ನ? ಇಪ್ಪತ್ತೈಕರೆ ಜಮೀನ್ದಾರ ಅದೀನಿ, ಇಪ್ಪತ್ತೈಕರೆ. ಅಪ್ಪನಿಗೆ ಹುಟ್ಟಿದರೆ ಮುಟ್ಟು ನನ್ನ. ನಿನ್ನಂಥೋರು ನೂರುಜನ ದುಡಿಯಾಕ ಬರ್ತಾರ ನನ್ನ ಮನಿಗೆ, ನೂರುಜನ' ಎಂದು ಸ್ವಪ್ರತಾಪ ಕೊಚ್ಚತೊಡಗಿದನು. ಇಪ್ಪತ್ತಕರೆ ಪಲ್ಲವಿ ಬಹಳ ಹೊತ್ತು ನಡೆಯಿತು. ಅಮಲಿನ ಅವಸ್ಥೆಯಿಂದ ಜೀವ ಸಹಜಾವಸ್ಥೆಗೆ ಇಳಿಯುತ್ತಿದ್ದಂತೆ, ಮುದುಕ ಜೇಬಿನಿಂದ ಚೀಟಿ ತೆಗೆದು, ಅದರಲ್ಲಿದ್ದ ನಂಬರನ್ನು ಜಗಳವಾಡಿದ ತರುಣನಿಗೆ ಕೊಟ್ಟನು. ತನ್ನ ಬಂಧುವಿಗೆ ಸ್ಟೇಷನ್ನಿಗೆ ಬರುವಂತೆ ಹೇಳಬೇಕೆಂದು ಬೇಡಿಕೊಂಡನು. ಕೂಡಲೇ ತರುಣನು ಮುತುವರ್ಜಿಯಿಂದ ತನ್ನ ಮೊಬೈಲಿಂದ ಆತಿಥೇಯನನ್ನು ಸಂಪರ್ಕಿಸಿದನು. ಆತಿಥೇಯನಿಗೆ ಅತಿಥಿಯ ಸ್ವಾಗತದಲ್ಲಿ ಸ್ವಲ್ಪವೂ ಆಸಕ್ತಿಯಿರಲಿಲ್ಲ. 'ಡೂಟಿಯೊಳಗದೀನಿ. ಟೇಶನ್ನಿಗೆ ಬರಕಾಗಲ್ಲ. ಬೇಕಾದರ ಮನಿ ಹುಡುಕ್ಕೊಂಡು ಬರಕ್ಹೇಳ್ರಿ' ಎಂದು ಫೋನಿಟ್ಟನು. ಈಗ ಇಪ್ಪತ್ತೈಕರೆ ಗದ್ದೆಯ ತೆವರಿ ಒಡೆದು, ಕೆನ್ನೆಯ ಮೇಲೆ ನೀರು ಹರಿಯತೊಡಗಿತು. ಯಾರ ಸ್ವಾಂತನವೂ ಅಣೆಕಟ್ಟಲಾಗಲಿಲ್ಲ. ತರುಣನು ಮನೆ ಹುಡುಕಿ ತಲುಪಿಸುವುದಾಗಿ ಹೇಳಲು, ಕಂಬನಿ ಗದ್ಗದ ನಿಂತವು. ಜನ್ಮದಲ್ಲಿ ಮಾತುಕತೆ ಸಾಧ್ಯವಿಲ್ಲ ಎಂಬಂತೆ ಮುಖ ಹರಿದುಕೊಂಡಿದ್ದ ಅವರು, ಹುಬ್ಬಳ್ಳಿಯಲ್ಲಿಳಿದು ಅಜ್ಜಮೊಮ್ಮಕ್ಕಳಂತೆ ಒಟ್ಟಿಗೆ ಹೋದರು. ನಮ್ಮದು ಪವಾಡಗಳ ದೇಶ!